ಓ.ಎಸ್. ನಂಃ 402/2021

**ಪಿ.ಡಬ್ಲ್ಯೂಃ 1**

**ದಿನಾಂಕ 05.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಟಿ.ಜಿ. ವಕೀಲರಿಂದಃ</u>**

13. ನಿಮ್ಮ ಹೆಚ್ಚುವರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಮೊದಲನೇ ಕಂಡಿಕೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ಮಾಹಿತಿ ಇದೆಯಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಶೆಡ್ಡು ಕಟ್ಟಿದ ವಿಚಾರವಾಗಿ ನಾನು ದಾವೆಯಲ್ಲಿ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ನಿಮ್ಮ ಹೆಚ್ಚುವರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಮೊದಲನೇ ಕಂಡಿಕೆಯಲ್ಲಿ ಬರೆದಿರುವ ವಿಷಯಗಳನ್ನು ನಿಮ್ಮ ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳನ್ನು ಮರೆ ಮಾಚುವ ಉದ್ದೇಶದಿಂದ ನಾನು ಹೊಸ ವಿಷಯಗಳನ್ನು ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಮೊದಲನೇ ಕಂಡಿಕೆಯಲ್ಲಿ ಹೊಸದಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ಈಗ ಶೆಡ್ಡು ಹಾಕಿದ ಕಾರಣ ನಾನು ಸದರಿ ವಿಷಯಗಳನ್ನು ಈಗ ಹೇಳಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ.

14. 2004 ನೇ ಇಸವಿ ಯಿಂದಲೂ ಸಹ ದಾವಾ ಆಸ್ತಿಯ ಸಂಬಂಧ ಪ್ರತಿವಾದಿಗಳ ಕುಟುಂಬಸ್ಥರ ಮಧ್ಯೆ ದಾವೆಗಳು ನಡೆಯುತ್ತಾ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಗಳ ನಾನು ನನ್ನ ವಕೀಲರಲ್ಲಿ ಕೇಳಿ ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಯ ಸಂಬಂಧ ಪ್ರತಿವಾದಿಗಳ ಕುಟುಂಬಸ್ಥರ ಮಧ್ಯೆ ನಡೆದ ಎಲ್ಲಾ ದಾವೆಗಳಲ್ಲಿಯು ಸಹ ಈ ದಾವೆಯ ಪ್ರತಿವಾದಿಗಳ ಪರ ನನ್ನನ್ನು ಈ ದಾವೆಯಲ್ಲಿ ಪ್ರತಿನಿಧಿಸುತ್ತಿರುವ ವಕೀಲರೇ ಅವರಿಗೆ ವಕಾಲತ್ತು ನಡೆಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

15. ಅಸಲು ದಾವೆ ಸಂಖ್ಯೆ 194/2010 ರ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯರ ಪರ ಇದೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಕಾಲತ್

ನಡೆಸಿರುವುದಾಗಿ ಪ್ರತಿವಾದಿಯರು ದಿನಾಂಕ 16.02.2023 ರಂದು ಈ ದಾವೆಯಲ್ಲಿ ನ್ಯಾಯಾಲಯಕ್ಕೆ ಮೆಮೋ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಈ ದಾವೆಯ ಆಸ್ತಿಯ ಸಂಬಂಧ ಎಸ್.ಸಿ. 105/2012 ರ ಪ್ರಕರಣ ನಡೆದಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ದಾವಾ ಆಸ್ತಿಯನ್ನು ಖರೀದಿಸಿದ ದ್ವೇಷದಿಂದಲೇ ಪ್ರತಿವಾದಿಯರು ನನ್ನೊಂದಿಗೆ ಜಗಳ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ದಾವಾ ಆಸ್ತಿಯನ್ನು 2013 ರಲ್ಲಿ ಖರೀದಿಸಿರುತ್ತೇನೆ ಎಂದರೆ ಸರಿ. ಎಸ್.ಸಿ. 105/2012 ರ ಪ್ರಕರಣವು 2011 ರಲ್ಲಿ ಆಗಿರುತ್ತದೆ ಎಂದರೆ ಸರಿ.

16. ನನ್ನ ಭಾವನಾದ ರಾಮೇಗೌಡರ ಜಮೀನಿಗೆ ನೀರು ಬಿಡುವ ವಿಚಾರವಾಗಿ ಜಗಳ ನಡೆದಿದೆ ಎಂದು ನಿಪಿ.27 ರಿಂದ 29 ರ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಎಸ್.ಸಿ. 105/2012 ರ ಪ್ರಕರಣದಲ್ಲಿ ಪ್ರತಿವಾದಿಯರನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ದೋಷ ಮುಕ್ತಗೊಳಿಸಿದೆ ಎಂದರೆ ಪ್ರತಿವಾದಿಯರು 1,10,000/- ರೂಪಾಯಿ ದಂಡ ಕಟ್ಟಿ ಹೊರ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ.

17. ದಾವಾ ಆಸ್ತಿಯು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಸುಮಾರು 60-70 ವರ್ಷಗಳಿಂದ ಯಾವುದೇ ಅಡೆ ತಡೆ ಇಲ್ಲದೇ ಪ್ರತಿವಾದಿಯರೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಯರ ಸ್ವಾಧೀನದಲ್ಲಿರುವ ವಿಷಯ ನನಗೂ ಮತ್ತು ಮಾರಾಟಗಾರರಾದ ಸ್ವಾಮಿಗೌಡ ಮತ್ತು ಕುಟುಂದವರಿಗೂ ಗೊತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಫಾರಂ ಹೌಸ್ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಈಗ 3 ತಿಂಗಳ ಹಿಂದೆ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ನಾಲ್ಕು ಕಂಬಗಳನ್ನು ನೆಟ್ಟು ಅದರ ಮೇಲೆ ಶೀಟ್ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಅಡ್ಡ ವಿಚಾರಣೆ ಮುಗಿದ ನಂತರದಲ್ಲಿ ನಿಪಿ.23 ರ ದಾಖಲೆಯನ್ನು ನಾನು ಈಗ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾರಾಟಗಾರರಾದ ಸ್ವಾಮಿಗೌಡ ಮತ್ತು ಕುಟುಂದವರಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ.

18. ದಾವಾ ಆಸ್ತಿಯ ಮಾರಾಟಗಾರರಾದ ಸ್ವಾಮಿಗೌಡ ಮತ್ತು ಕುಟುಂದವರು ದಾವಾ ಆಸ್ತಿಯ ಸಂಬಂಧ ಕಂದಾಯ ಕಟ್ಟಿರುತ್ತಾರಾ ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು

ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಪ್ರತಿವಾದಿಯರು ಸ್ವಾಧೀನದಲ್ಲಿರುವ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**